ಶ್ರೀ ಜಿ. ರಾಜೂಗೌಡ.—ಮೈಸೂರು ಜಿಲ್ಲೆಯಲ್ಲಿ ಪ್ರಾಥಮಿಕ ಹಾಗೂ ಉನ್ನತ ಪ್ರಾಥಮಿಕ ಶಾಲೆಗಳಿಗೆ ೧೯೮೯-೯೦ರಲ್ಲಿ ಒಟ್ಟು ಮಂಜೂರಾದ ಶಿಕ್ಷಕರ ಹುದ್ದೆಗಳು ೮೭೮ ಎಂದು ಹೇಳಿದ್ದೀರಿ. ಇದು ಏನು ನಿಜವೋ ಸುಳ್ಳೋ ಗೊತ್ತಿಲ್ಲ. ಇವರ ಪೈಕಿ ಕೆಲಸಕ್ಕೆ ಹಾಜರಾಗದೆ ಇರತಕ್ಕ ಶಿಕ್ಷಕರು ಎಷ್ಟಿದ್ದಾರೆ. ಹಾಗೂ ಖಾಲಿ ಇರಂಥ ಹುದ್ದೆಗಳಿಗೆ ಇನ್ನೂ ನೇಮಕಾತಿ ಆಗಿಲ್ಲದೆ ಇರತಕ್ಕ ಶಿಕ್ಷಕರ ಸಂಖ್ಯೆ ಎಷ್ಟು ?

ಶ್ರೀ ಕೆ. ಹೆಚ್. ರಂಗನಾಥ್.—"ಎ" ಪ್ರಶ್ನೆಗೆ ಉತ್ತರವಾಗಿ ೮೭೮ ಎಂದು ಉತ್ತರ ಕೊಟ್ಟಿದ್ದೇನೆ.

ಶ್ರೀ ಜಿ. ರಾಜೂಗೌಡ.—ಈಗ ಕೊರತೆ ಇರತಕ್ಕ ಶಿಕ್ಷಕರ ಸಂಖ್ಯೆ ಎಷ್ಟು ? ಎಂದು ನಾನು ಕೇಳುತ್ತಿದ್ದೇನೆ ;

ಶ್ರೀ ಕೆ. ಹೆಚ್. ರಂಗನಾಥ್.—ನಾನು ಉತ್ತರದಲ್ಲೇ ಹೇಳಿದ್ದೇನೆ. ೮೭೮ ಹುದ್ದೆಗಳನ್ನು ಭರ್ತಿ ಮಾಡಲು ಅಷ್ಟೇ ಪ್ರಮಾಣದ ಯೋಜನೇತರ ಹುದ್ದೆಗಳನ್ನು ಖಾಲಿ ಇಡಬೇಕೆಂದು ಷರತ್ತನ್ನು ವಿಧಿಸಲಾಗಿತ್ತು. ಈಗ ಈ ಹುದ್ದೆಗಳನ್ನು ತುಂಬಲು ಕ್ರಮ ಕೈಗೊಳ್ಳಲಾಗಿದೆ ಎಂದು ಉತ್ತರದಲ್ಲೇ ಹೇಳಿದ್ದೇನೆ,

ಶ್ರೀ ಜಿ. ರಾಜೂಗೌಡ.—ಕೊರತೆ ಇರುವ ಹುದ್ದೆಗಳಿಗೆ ಯಾವಾಗ ಭರ್ತಿ ಮಾಡುತ್ತೀರಿ ?

ಅಧ್ಯಕ್ಷರು.—ಈಗ ರೆಕ್ರೂಟ್‌ಮೆಂಟ್ ಆಗುತ್ತದೆ. ಆ ಸಂದರ್ಭದಲ್ಲಿ ಈ ಹುದ್ದೆಗಳನ್ನು ತುಂಬುತ್ತಾರೆ.

ಶ್ರೀ ಜಿ. ರಾಜೂಗೌಡ.—ಮೈಸೂರು ಜಿಲ್ಲಾ ಪರಿಷತ್ತಿನಲ್ಲಿ ವಾರಕ್ಕೊಂದು ಸಲ ಸಂದರ್ಶನವನ್ನು ಇಟ್ಟುಕೊಂಡಿದ್ದಾರೆ. ಕೇವಲ ೫೦ ಜನರನ್ನು ಒಂದು ದಿನದಲ್ಲಿ ಸಂದರ್ಶನವನ್ನು ಮಾಡುತ್ತಾರೆ. ಈ ರೀತಿ ಮಾಡಿದರೆ ೯೦-೯೧ರಲ್ಲಿ ಶಿಕ್ಷಕರನ್ನು ನೇಮಕಾತಿ ಮಾಡಲು ಆಗುವುದಿಲ್ಲ. ಆದ್ದರಿಂದ ಅದಷ್ಟು ಬೇಗನೆ ಅಂದರೆ ೬-೧೦ ದಿವಸದಲ್ಲಿ ಎಲ್ಲಾ ಸಂದರ್ಶನವನ್ನು ಮುಗಿಸಲು ಅವರಿಗೆ ಆದೇಶವನ್ನು ನೀಡುತ್ತೀರಾ ?

ಶ್ರೀ ಕೆ. ಹೆಚ್. ರಂಗನಾಥ್.—ಈ ಸಲಹೆಯನ್ನು ಪರಿಶೀಲನೆ ಮಾಡುತ್ತೇನೆ.

ಆಂಗ್ಲ ಮಾಧ್ಯಮ ಶಾಲೆಗಳನ್ನು ನಡೆಸಲು ಅನುಮತಿ

೧೩೮೪. ಶ್ರೀ ಖಮರುಲ್ ಇಸ್ಲಾಂ (ಗುಲ್ಬರ್ಗ).—ಮಾನ್ಯ ಶಿಕ್ಷಣ, ಯುವಜನ ಸೇವೆ, ಕ್ರೀಡೆ, ಕನ್ನಡ ಮತ್ತು ಸಂಸ್ಕೃತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಹಮ್ಮಿಕೊಟ್ಟು ಉತ್ತರಿಸುವರೆ :—

ಅ) ರಾಜ್ಯಗಳ ಶ್ರಿಭಾಷಾ ಸೂತ್ರವನ್ನು ಜಾರಿಗೊಳಿಸಬೇಕೆಂಬುದನ್ನು ಸಂವಿಧಾನವು ರಕ್ಷಿಸಿಂತ್ತದೆ ಎಂಬುದು ವಾಸ್ತವವಲ್ಲವೇ ;

ಆ) ಆಂಗ್ಲ ಮಾಧ್ಯಮ ಪ್ರಾಥಮಿಕ ಶಾಲೆಗಳಿಗೆ ಅನುಮತಿ ನೀಡದೆಯೇ ಅಲ್ಪ ಸಂಖ್ಯಾತರ ಹಕ್ಕುಗಳಿಗೆ ಚ್ಯುತಿ ತರಲಾಗುತ್ತಿದೆ ಎಂಬುದೂ ವಾಸ್ತವವಲ್ಲವೇ ;

ಇ) ಹಾಗಿದ್ದಲ್ಲಿ, ಸರ್ಕಾರವು ಅಲ್ಪ ಸಂಖ್ಯಾತರ ಹಿತ ರಕ್ಷಣೆಗಾಗಿ ಆಂಗ್ಲ ಮಾಧ್ಯಮ ಶಾಲೆಗಳನ್ನು ನಡೆಸಲು ಅನುಮತಿ ನೀಡುವುದೇ ?

ಶ್ರೀ ಕೆ. ಹೆಚ್. ರಂಗನಾಥ್ (ಶಿಕ್ಷಣ, ಯುವಜನ ಸೇವೆ, ಕ್ರೀಡೆ, ಕನ್ನಡ ಮತ್ತು ಸಂಸ್ಕೃತಿ ಮಂತ್ರಿಗಳು).—

ಅ) ಇಲ್ಲ.

ಆ) ಇಲ್ಲ.

ಇ) ಆಂಗ್ಲ ಮಾಧ್ಯಮ ಶಾಲೆಗಳಿಗೆ ಅನುಮತಿ ನೀಡುವ ವಿಚಾರವು ಪರಿಶೀಲನೆಯಲ್ಲಿದೆ ;

SRI QUAMARUL ISLAM.—I want one clarification from the Hon'ble Minister. How much time the Government will take to arrive at a decision regarding permitting English Medium Schools ?

SRI K. H. RANGANATH.—Shortly.

SRI QUAMARUL ISLAM.—Keeping inview the three language formula, when will the Government declare its language policy?

SRI K. H. RANGANATH.—The language policy is in vogue now.

SRI QUAMARUL ISLAM.—It is there but the linguistic minorities are not satisfied with the policy and after the decision of the Court, you have said that the Government is going to declare its policy and a new Government Order will be issued. How much time it will take to issue a new Government Order in this regard?

SRI K. H. RANGANATH.—There is a Government Order of 1989. During President's rule, it was issued and it is in vogue.

SRI QUAMARUL ISLAM.—That is not satisfying linguistic minorities.

SRI K. H. RANGANATH.—That is the opinion of the Hon'ble Member. That is a different matter. If the Hon'ble Member were to bring to the notice of the Government that there is any lacunae, then the Government will take note of it.

SRI QUAMARUL ISLAM.—I will bring it to the notice of the Hon'ble Minister seperately.

ಶ್ರೀ ಡಿ. ಬಿ. ಚಂದ್ರೇಗೌಡ.—ಶೈಕ್ಷಣಿಕ ವರ್ಷ ಪ್ರಾರಂಭವಾಗಿ ಒಂದು ತಿಂಗಳು ಆಗುತ್ತಾ ಬಂತು. ಅಲ್ಪ ಕಾಲದಲ್ಲಿಯೇ ತೀರ್ಮಾನ ತೆಗದುಕೊಳ್ಳಲಾಗುತ್ತದೆಂದು ಹೇಳಿದರೆ ಆದು ಈ ವರ್ಷದ ಅಕಾಡಮಿಕ್ ಇಯರ್‌ಗೆ ಅಪ್ಲೈ ಆಗುತ್ತದೆಯೋ ಅಥವಾ ಮುಂದಿನ ವರ್ಷಕ್ಕೆ ಅಪ್ಲೈ ಆಗುತ್ತದೆಯೋ ?

ಶ್ರೀ ಕೆ. ಹೆಚ್ ರಂಗನಾಥ್.—ಇದು ಇಂಗ್ಲೀಷ್ ಮೀಡಿಯಂ ಶಾಲೆಗಳಿಗೆ ಸಂಬಂಧಪಟ್ಟ ಪ್ರಶ್ನೆ ಆಗಿರುವುದರಿಂದ ನಾನು ಆ ತರಹ ಹೇಳಿದೆ. ಬಾಕಿ ನರ್ಸರಿ ಪ್ರಾಥಮಿಕ ಶಾಲೆಗಳು ಪ್ರಾರಂಭವಾಗಿವೆ. ಶಾರ್ಟಲಿ ಅಂದರೆ ೮–೧೦ ದಿವಸದಲ್ಲಿ ತೀರ್ಮಾನವಾಗುತ್ತದೆ.

SRI K. C. MODGEKAR DESAI—Regarding three language formula, just now the Hon'ble Minister has replied 'No' to the question—"Whether it is not a fact that the Constitution guarantees the implementation of 3 languages formula in the States". I have got the proceedings of the Government of Karnataka. In that, they have clearly stated that necessary arrangements will be made to publish important Government notices and rules in the minority language in the area as indicated therein. I will bring to the notice of the Hon'ble Minister the Government Order No. DPAR 12 LML 81 Dated 24th November 1982 wherein it was clearly directed to publish important Government notices and rules in the minority languages. Whether the Government is aware of it and whether the Government has taken action to publish important notice and rules in minority languages? Which are the minority languages they have published? There is Tamil language, Telugu language, Marathi language, Urdu language, Malayalam language, Konkani as well as Tulu languages are there. They are more than 15%. In the name of Janakiram, Deputy Secretary of

Government, he has ordered in No. 12 LML 81, Bangalore dated 24th November, 1982 that "under the circumstances pending publication of the census data for 1981 Government are pleased to direct that necessary orders may be made to publish important Government notices and rules in the minority languages as indicated in column No. 3 in the appended statement in addition to Kannada and English in which they are usually published" Sir, it is the direction of the Government. Even though the hon'ble Minister is telling it is absolutely wrong. "Whether it is not a fact that Constitution guarantees the implementation of three languages formula in the States." The reply is "No". Sir, which is correct, can I know that?

SRI K. H. RANGANATH.—Government statement is correct. It is not in the Constitution. It is a national policy which has been accepted by the Government of India and the respective State Governments. Respective State Governments have accepted the national policy i.e. three language policy. It does not find a place in the Constitution.

ಶ್ರೀ ವಾಟಾಳ್ ನಾಗರಾಜ್.—ಮಾನ್ಯ ಮಂತ್ರಿಗಳು ತ್ರಿಭಾಷಾ ಸೂತ್ರದ ಬಗ್ಗೆ ಹೇಳಿದ್ದಾರೆ. ಈ ಗೋಕಾಕ್ ವರದಿ ಜಾರಿ ಮಾಡುವುದರ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ. ಅದು ಯಾವ ಮಟ್ಟದಲ್ಲಿದೆ ಮತ್ತು ಯಾವ ಹಂತದಲ್ಲಿದೆ?.

ಶ್ರೀ ಕೆ. ಹೆಚ್. ರಂಗನಾಥ್.—ಗೋಕಾಕ್ ವರದಿ ಆದ ಮೇಲೆ ಸರ್ಕಾರ ಒಂದು ಆಜ್ಞೆಯನ್ನು ಹೊರಡಿಸಿತು. ಆ ಆಜ್ಞೆ ಹೈಕೋರ್ಟ್‌ನಲ್ಲಿ ಸಿಂಧು ಆಗಿಲ್ಲ. ನಂತರ ೧೯೮೯ನೇ ಇಸವಿಯಲ್ಲಿ ಮತ್ತೊಂದು ಆಜ್ಞೆಯನ್ನು ಸರ್ಕಾರ ಹೊರಡಿಸಿದೆ.

ಹುಬ್ಬಳ್ಳಿ ಧಾರವಾಡ ಮಹಾನಗರ ಪ್ರದೇಶಕ್ಕೆ ಪ್ರತ್ಯೇಕ ಡಿ.ಡಿ ಪಿ.ಐ. ಕಚೇರಿ

೬೧೮. ಶ್ರೀ ಎಸ್. ಆರ್. ಮೋರೆ. (ಧಾರವಾಡ).—ಮಾನ್ಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಹುಬ್ಬಳ್ಳಿ ಧಾರವಾಡ ಮಹಾನಗರ ಪ್ರದೇಶಕ್ಕೆ ಪ್ರತ್ಯೇಕ ಡಿಡಿಪಿಐ ಕಚೇರಿ ಬೇಕೆನ್ನುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಆ) ಹಾಗಿದ್ದಲ್ಲಿ ಸರ್ಕಾರವು ಡಿಡಿಪಿಐ ಕಚೇರಿಯನ್ನು ಮಂಜೂರು ಮಾಡುವುದರ ಬಗ್ಗೆ ತೆಗೆದುಕೊಂಡ ಕ್ರಮಗಳೇನು?

ಇ) ಇಲ್ಲದಿದ್ದಲ್ಲಿ ಅದಕ್ಕೆ ಕಾರಣಗಳೇನು ?

ಶ್ರೀ ಕೆ. ಹೆಚ್. ರಂಗನಾಥ್ (ಶಿಕ್ಷಣ ಸಚಿವರು).—

ಅ) ಬಂದಿಲ್ಲ.

ಆ) ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಶ್ರೀ ಎಸ್. ಆರ್. ಮೋರೆ.—ಮಾನ್ಯ ಮಂತ್ರಿಗಳು ಕೊಟ್ಟಿರತಕ್ಕ ಉತ್ತರ ತೃಪ್ತಿಕರವಾಗಿಲ್ಲ. ಇವರು ೧೯೭೬ ಹಾಗೂ ೫೮ ರ ಆಂಕಿ ಅಂಶಗಳ ಆಧಾರದ ಮೇಲೆ ಈ ಉತ್ತರ ತಯಾರು ಮಾಡಿರುವುದು ಎಂದು ಕಾಣುತ್ತದೆ. ಈಗಾಗಲೇ ಹುಬ್ಬಳ್ಳಿ ಮತ್ತು ಧಾರವಾಡದಲ್ಲಿ ಎಂಟು ಪಟ್ಟು ಶಾಲೆಗಳು ಹೆಚ್ಚಾಗಿವೆ. ಆದ್ದರಿಂದ ಡಿಡಿಪಿಐ ಅವರಿಗೆ ಎಲ್ಲಾ ಶಾಲೆಗಳನ್ನು ತನಿಖೆ ಮಾಡಲು ಸಾಧ್ಯವಾಗುತ್ತಿಲ್ಲವಾದ ಕಾರಣ ಅಲ್ಲಿಗೆ ಪ್ರತ್ಯೇಕವಾಗಿ ಒಂದು ಡಿಡಿಪಿಐ ಕಛೇರಿ ತೆರೆಯಲು ಯೋಚನೆ ಮಾಡಿದ್ದೀರಾ ?